# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 1131 |
| ಮಾನ್ಯ ಸದಸ್ಯರ ಹೆಸರು | | ಶ್ರೀ ಶರಣಗೌಡ ಬಯ್ಯಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 17.03.2025 |
| | ಪ್ರಶ್ನೆ | ಉತ್ತರ |
| ಅ) | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಬಾಹ್ಯ ಪರೀಕ್ಷಾ ಕೇಂದ್ರದ ಹೆಸರಿನಲ್ಲಿ ಆರ್ಥಿಕ ದುರುಪಯೋಗ ಮಾಡಿಕೊಂಡಿರುವ ಹಗರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಗೌರವಾನ್ವಿತ ರಾಜ್ಯಪಾಲರು 09.09.2024ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಆನಂದ ಬೈರಾರೆಡ್ಡಿರವರ ಸಮಿತಿ ರಚಿಸಿದ್ದು ಸಮಿತಿಯ ವರದಿ ಸರ್ಕಾರಕ್ಕೆ ಸ್ವೀಕೃತವಾಗಿದೆಯೇ: | ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿ 2021-22ರ ಅವಧಿಯಲ್ಲಿ ಅಂದಿನ ಕುಲಪತಿಗಳು ಮತ್ತು ವಿಶ್ವವಿದ್ಯಾಲಯದ ಇತರ ಅಧಿಕಾರಿಗಳು Axis Bank ನಲ್ಲಿ ಪ್ರತ್ಯೇಕ ಖಾತೆ ತೆರೆದು ಹಲವಾರು ಲಕ್ಷಗಳ ಹಣ ದುರುಪಯೋಗ ಮಾಡಿದ್ದಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಘನತೆವೆತ್ತ ರಾಜ್ಯಪಾಲರ ಸಚಿವಾಲಯದ ಅಧಿಸೂಚನೆ ಸಂಖ್ಯೆ: GS 10 KOM 2024, dated: 09.09.2024ರನ್ವಯ Justice Anand Byrareddy, Former Judge, Karnataka High Court, ಇವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ.<br><br>ಸದರಿ ತನಿಖಾಧಿಕಾರಿಯವರು ಘನತೆವೆತ್ತ ರಾಜ್ಯಪಾಲರ ಸಚಿವಾಲಯಕ್ಕೆ ದಿನಾಂಕ: 27.09.2024ರಂದು ವರದಿಯನ್ನು ಸಲ್ಲಿಸಿರುತ್ತಾರೆ. |
| ಆ) | ಈ ಹಗರಣದ ಆಪಾದಿತರ ವಿರುದ್ಧ ಜರುಗಿಸಲಾಗಿರುವ ಕಾನೂನು ಮತ್ತು ಇಲಾಖಾ ಕ್ರಮಗಳೇನು: (ವಿವರ ನೀಡುವುದು) | Justice Anand Byrareddy, Former Judge, Karnataka High Court, ಇವರು ಪ್ರಕರಣದ ಕುರಿತು "There is insufficient evidence to support the allegations against concerned Officers and others" ಎಂದು ಘನತೆವೆತ್ತ ರಾಜ್ಯಪಾಲರಿಗೆ ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ಘನತೆವೆತ್ತ ರಾಜ್ಯಪಾಲರು ಒಪ್ಪಿ, ಈ ಹಗರಣದ ಆಪಾದಿತರ ವಿರುದ್ಧ ಯಾವುದೇ ಕ್ರಮಗಳನ್ನು ಜರುಗಿಸಲು ಶಿಫಾರಸ್ಸು ಮಾಡಿರುವುದಿಲ್ಲ. |
| ಇ) | ಈ ಹಗರಣದ ಬಗ್ಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯು ತೆಗೆದುಕೊಂಡಿರುವ ತೀರ್ಮಾನಗಳೇನು: (ನಡಾವಳಿಗಳ ವಿವರ ನೀಡುವುದು) | ಈ ಹಗರಣದ ಬಗ್ಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯು ಯಾವುದೇ ತೀರ್ಮಾನಗಳನ್ನು ತೆಗೆದುಕೊಂಡಿರುವುದಿಲ್ಲ. |
| ಈ) | ಇದೇ ಹಗರಣದ ಅಪಾಧಿತರ ವಿರುದ್ಧ ಮುಂದಿನ ಕಾನೂನು ಕ್ರಮ ಜರುಗಿಸಲು ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಇವರು 17.11.2013ರಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ಸೆಕ್ಷನ್-17(a) ರಂತೆ ಕೋರಿರುವ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1992ರ ಪ್ರಕರಣ 8(2)ರನ್ವಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಧಿಕಾರಿ / ಸಿಬ್ಬಂದಿಗಳ ಶಿಸ್ತು ಪ್ರಾಧಿಕಾರವು ಘನತೆವೆತ್ತ ರಾಜ್ಯಪಾಲರೇ ಆಗಿರುವ ಮಾಹಿತಿಯನ್ನು ಮಾನ್ಯ ಲೋಕಾಯುಕ್ತ ಕಚೇರಿಗೆ ತಿಳಿಸುವುದರ ಮೂಲಕ ಹಗರಣದ ಅಪಾಧಿತರ ವಿರುದ್ಧ ಮುಂದಿನ ಕಾನೂನು |

| | | |
|---|---|---|
| | ಪೂರ್ವಾನುಮತಿಯ ಮನವಿಯು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕ್ರಮ ಜರುಗಿಸಲು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಇವರು 17.11.2013ರಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ಸೆಕ್ಷನ್-17(a) ರಂತೆ ಕೋರಿರುವ ಪೂರ್ವಾನುಮತಿಯ ಮನವಿಯನ್ನು ಘನತೆವೆತ್ತ ರಾಜ್ಯಪಾಲರು ತಿರಸ್ಕರಿಸಿದ್ದು, ಈ ಸಂಬಂಧ ಘನತೆವೆತ್ತ ರಾಜ್ಯಪಾಲರ ಸಚಿವಾಲಯದಿಂದ ದಿನಾಂಕ: 06.03.2025ರಂದು ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರಿಗೆ ಪತ್ರ ಬರೆದಿರುತ್ತಾರೆ. |
| ಉ) | ಈ ಆರ್ಥಿಕ ಹಗರಣದ ಸಂಬಂಧ ಆಡಿಟ್ ವರದಿ ಸರ್ಕಾರಕ್ಕೆ ಸ್ವೀಕೃತವಾಗಿದೆಯೇ: ವರದಿಯಂತೆ ಯಾವ ಕ್ರಮ ಜರುಗಿಸಲಾಗಿದೆ: ಹಗರಣದಿಂದ ಸಾರ್ವಜನಿಕ ನಿಧಿ ಪೋಲಾಗಿದ್ದು ನಷ್ಟ ವಸೂಲಿಗೆ ಸರ್ಕಾರದಿಂದ ಆ ವಿಶ್ವವಿದ್ಯಾಲಯದ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ. ಸರ್ಕಾರದ ವಿಶ್ವವಿದ್ಯಾಲಯವು ಖಾಸಗಿ ಬ್ಯಾಂಕುಗಳಲ್ಲಿ ಖಾತೆ ತೆರೆಯಲು ಅವಕಾಶವಿದೆಯೇ? (ವಿವರ ನೀಡುವುದು) | ಈ ಆರ್ಥಿಕ ಹಗರಣದ ಸಂಬಂಧ ಆಡಿಟ್ ವರದಿ ಸರ್ಕಾರಕ್ಕೆ ಸ್ವೀಕೃತವಾಗಿರುವುದಿಲ್ಲ. ಆಡಿಟ್ ವರದಿ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಲಾಗುವುದು.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1992ರನ್ವಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಖಾಸಗಿ ಬ್ಯಾಂಕುಗಳಲ್ಲಿ ಖಾತೆ ತೆರೆಯಲು ಅವಕಾಶವಿರುವುದಿಲ್ಲ. |
| ಊ) | ಸದರಿ ಪ್ರಕರಣದ ಬಗ್ಗೆ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು? (ವರದಿಯ ಬಗ್ಗೆ ಮಾಹಿತಿ ಒದಗಿಸುವುದ) | ಸದರಿ ಪ್ರಕರಣದ ಕುರಿತು ಘನತೆವೆತ್ತ ರಾಜ್ಯಪಾಲರ ಸಚಿವಾಲಯದ ಅಧಿಸೂಚನೆ ಸಂಖ್ಯೆ: GS 10 KOM 2024, dated: 09.09.2024ರನ್ವಯ Justice Anand Byrareddy, Former Judge, Karnataka High Court, ಇವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ.<br><br>ಸದರಿ ತನಿಖಾಧಿಕಾರಿಯ ಘನತೆವೆತ್ತ ರಾಜ್ಯಪಾಲರ ಸಚಿವಾಲಯ ದಿನಾಂಕ: 27.09.2024ರಂದು ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನುಸಾರ ಪ್ರಕರಣವನ್ನು ಘನತೆವೆತ್ತ ರಾಜ್ಯಪಾಲರು ಇತ್ಯರ್ಥಪಡಿಸಿರುತ್ತಾರೆ. |

ಸಂಖ್ಯೆ: ಇಡಿ 104 ಯುಎನ್‌ಇ 2025

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು